1	2	3	4	5
9.	ಚಿಕ್ಕಮಗಳೂರು		18,20,126-00	
10.	ಚಿತ್ರದುರ್ಗ		18,09,092-00	
11.	ಮಂಗಳೂರು		14,24,358-00	
12.	ಉಡುಪಿ		12,52,547-00	
13.	ಕೊಪ್ಪಳ		12,09,898-00	
14.	ಬಳ್ಳಾರಿ		8,71,560-00	
15.	ಕೋಲಾರ		8,68,989-00	
16.	ಹಾವೇರಿ		8,28,791-00	
17.	ರಾಯಚೂರು		8,25,575-00	
18.	ಮಡಿಕೇರಿ		7,49,554-00	
19.	ಮಂಡ್ಯ		5,86,953-00	
20.	ಗದಗ		4,71,997-00	
21.	ಧಾರವಾಡ		4,27,687-00	
22.	ಚಾಮರಾಜನಗರ		3,18,501-00	
23.	ಬಿಜಾಪುರ		1,55,443-00	
24.	ಕಾರವಾರ		1,15,822-00	
25.	ಬೀದರ್		-	
26.	ಬಾಗಲಕೋಟೆ		-	
	ಒಟ್ಟು		**3,98,36,955-00**	

30-6-2002ರ ಅಂತ್ಯದವರೆಗೆ ಇತರೆ ಸಂಸ್ಥೆಗಳಿಂದ ಗ್ರಂಥಾಲಯಗಳಿಗೆ ಬರಬೇಕಾದ ಗ್ರಂಥಾಲಯ ಕರದ ಬಾಕಿ ವಿವರಣಾ ಪಟ್ಟಿ

ಕ್ರ.ಸಂ	ಜಿಲ್ಲೆಗಳ ಹೆಸರು	ಇತರೆ ಸಂಸ್ಥೆಗಳ ಸಂ	ಮೊತ್ತ	ಷರಾ
1	2	3	4	5
1.	ಶಿವಮೊಗ್ಗ	1	56,547-00	
2.	ಚಿಕ್ಕಮಗಳೂರು	1	28,872-00	
3.	ಮಂಡ್ಯ	1	15,125-00	
4.	ಬೆಳಗಾಂ	1	3,957-00	
	ಒಟ್ಟು	**4**	**1,04,501-00**	

ಹುಬ್ಬಳ್ಳಿಯ ರಾಜ್ಯ ಸಮಾಚಾರ ಕೇಂದ್ರ

2001(1906) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಯಾವ ಯಾವ ನಗರಗಳಲ್ಲಿ ವಾರ್ತಾ ಇಲಾಖೆಯ ವತಿಯಿಂದ ರಾಜ್ಯ ಸಮಾಚಾರ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ; (ವಿವರ ನೀಡುವುದು) ;

ಅ) ಆ ಸಮಾಚಾರ ಕೇಂದ್ರದಲ್ಲಿ ಸಮರ್ಪಕವಾದ ಸಿಬ್ಬಂದಿ ಅಧಿಕಾರಿಗಳು ಕಾರ್ಯನಿರ್ವಹಿಸುವಂತೆ ಸರ್ಕಾರ ಗಮನಹರಿಸಿದೆಯೇ;

ಇ) ಧಾರವಾಡ - ಹುಬ್ಬಳ್ಳಿಯಲ್ಲಿರುವ ಸಮಾಚಾರ ಕೇಂದ್ರದ ಕಾರ್ಯದ ಅರಿವು ಸರ್ಕಾರಕ್ಕಿದೆಯೇ;

ಈ) ಈ ಕೇಂದ್ರದಲ್ಲಿ ಯಾವಾಗಿನಿಂದ ಅಧಿಕಾರಿ ಹುದ್ದೆ ಖಾಲಿ ಇದೆ? ಇದನ್ನು ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಂಡಿರುವುದಿಲ್ಲ;

ಉ) ಇದರಿಂದ ಸಾರ್ವಜನಿಕರಿಗೆ ಇಲಾಖೆಗಳಿಗೆ ಸುದ್ದಿ ಮಾಧ್ಯಮದ ಪತ್ರಕರ್ತರಿಗೆ ಅನಾನುಕೂಲ ಉಂಟಾಗಿಲ್ಲವೆ;

ಊ) ಈ ನಿರ್ಲಕ್ಷಕ್ಕೆ ಕಾರಣರ್ಯಾರು; ಯಾವಾಗ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು):

ಅ) ಬೆಂಗಳೂರು ಮತ್ತು ಹುಬ್ಬಳ್ಳಿ.

ಆ) ಹೌದು.

ಇ) ಇದೆ.

ಈ) ಹುದ್ದೆ ಖಾಲಿ ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಶಿವಮೊಗ್ಗ ನಗರಕ್ಕೆ ಮಹಿಳಾ ಪ್ರಥಮ ದರ್ಜೆ ಕಾಲೇಜು ಮಂಜೂರ್ಮಾಡುವ ಬಗ್ಗೆ

2002(625) ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ನಗರಕ್ಕೆ ಹೊಸದಾಗಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು) ?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):

ಅ) ಇಲ್ಲ

ಉದ್ಭವಿಸುವುದಿಲ್ಲ.

ಶಿವಮೊಗ್ಗ ತಾಲ್ಲೂಕು ಗಾಡಿಕೊಪ್ಪ ಪ್ರದೇಶದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಬಗ್ಗೆ

2003(627) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ತಾಲ್ಲೂಕು, ಗಾಡಿಕೊಪ್ಪ ಪ್ರದೇಶದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಭಿಸುವ ಬಗ್ಗೆ ಪ್ರಸ್ತಾವನೆ ಇದೆಯೇ? (ವಿವರ ನೀಡುವುದು)

ಪ್ರೊ॥ ಬಿ.ಕೆ. ಚಂದ್ರಶೇಖರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):